



ಮೊಸಂಡಾ ಒಂದು ಅಲಂಕಾರಿಕ ಹೂವು. ಇದರಲ್ಲಿ ಎರಡು ವಿಧ. ಒಂದು ಕಾಡು ಮೊಸಂಡಾ. ಬಿಳಿ ಬಣ್ಣ ಹೊಂದಿರುವ ಈ ಹೂವನ್ನು ಬೆಳ್ಳಿಸೊಪ್ಪು ಎಂದೂ ಕರೆಯುತ್ತಾರೆ. ಇನ್ನೊಂದು ಅಲಂಕಾರಿಕ ಮೊಸಂಡಾ. ಮಾಂಸದ ಬಣ್ಣ ಅಥವಾ ತೆಳು ಗುಲಾಬಿ ಬಣ್ಣವನ್ನು ಹೊಂದಿರುವಂಥದು. ಹಸಿರು ಗಿಡದ ಮೇಲೆ ಕುಂಕುಮ ಚೆಲ್ಲಿದಂತೆ ಕಂಡುಬರುತ್ತದೆ. ಇದರ ವೈಜ್ಞಾನಿಕ ಹೆಸರು ಮುಸಂಡಾ (musanda).

ಈ ಹೂವಿನ ರಚನೆಯು ಇತರ ಹೂವುಗಳಿಗಿಂತ ಸ್ವಲ್ಪ ಭಿನ್ನ. ವಿಶೇಷವಾದ ಪರಿಮಳ ಮತ್ತು ಮುದ್ದೆ ಮುದ್ದೆಯಾಗಿ ಹೂ ಬಿಟ್ಟು ಎಸಳಿನಲ್ಲಿ ಬಿಳಿಯ ರೇಖೆಗಳನ್ನು ಹೊಂದಿರುತ್ತದೆ. ವೆಲ್ವೆಟ್‌ನಂತಹ ಮೃದುವಾದ ರಚನೆ ಹೊಂದಿದೆ. ಗಿಡದಲ್ಲಿ ಹೂ ಬಿಟ್ಟ ಮರುದಿನ, ಹೂವಿನ ಮಧ್ಯಭಾಗದಿಂದ ಹಳದಿ ಬಣ್ಣದ ಪುಟಾಣಿ ಹೂ ಚಿಗುರೊಡೆದು ಮೊಸಂಡಾದ ಅಂದವನ್ನು ವೃದ್ಧಿಸುತ್ತದೆ. ಇದರ ಗಿಡವು ತುಂಬಾ ಎತ್ತರಕ್ಕೆ ಬೆಳೆಯುಬಲ್ಲ ಸಾಮರ್ಥ್ಯವನ್ನು ಹೊಂದಿದ್ದು ಕಾಂಡ ಹಾಗೂ ರೆಂಬೆಗಳು ತುಂಬ ಮೃದು.

ಇದರ ಎಲೆಗಳಲ್ಲಿ ಔಷಧೀಯ ಗುಣಗಳಿವೆ. ಹಿಂದಿನ ಕಾಲದಲ್ಲಿ ಎಲೆಗಳನ್ನು ನೀರಿನಲ್ಲಿ ನೆನೆಸಿ ಸ್ನಾನಕ್ಕೆ ಬಳಸುತ್ತಿದ್ದರು. ಆಗ ಅದುವೇ ಶಾಂಪೂ ರೀತಿಯಲ್ಲಿ ಬಳಕೆಯಾಗುತ್ತಿತ್ತು. ಮನೆಯಂಗಳದಲ್ಲಿ ಮೊಸಂಡಾ ಇದ್ದರೆ ಚಿಟ್ಟೆಗಳ ಹಾಗೂ ಪುಟ್ಟ ಹಕ್ಕಿಗಳ ಭೇಟಿಯೂ ಹೆಚ್ಚುತ್ತದೆ.



